ಶ್ರೀ ಎನ್.ಎ. ಚನ್ನೇಗೌಡ:—ಕೆರೆಯ ಕೋಡಿ ಒಡೆದಿರುವುದನ್ನು ದುರಸ್ತು ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದುವರೆಗೆ ಎಷ್ಟು ಖರ್ಚುಮಾಡಿದ್ದೀರಿ? ಪ್ರತಿವರ್ಷ ಈ ರೀತಿ ಕೋಡಿ ಒಡೆಯುತ್ತಾ ಇರುವುದರಿಂದ ತಕ್ಷಣ ತಕ್ಕ ಬಂದೋಬಸ್ತ್ ಮಾಡಿ ರೈತರಿಗೆ ಏನು ಅನುಕೂಲಗಳನ್ನು ಮಾಡಿಕೊಡುತ್ತೀರಿ?

ಶ್ರೀಮತಿ ಬಸವರಾಜೇಶ್ವರಿ:—ಏನಾದರೂ ವೆಸ್ಟೆಡ್ ಇಂಟರೆಸ್ಟ್ ಇದ್ದರೆ ಈ ರೀತಿ ಆಗುತ್ತದೆ. ಅಂಥ ಕಡೆ ಪರದಿಯನ್ನು ತರಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಅಲ್ಲಿ ಈರೀತಿ ಅಕ್ರಮ ಸಾಗುವಳಿ ಎಷ್ಟೋ ವರ್ಷಗಳಿಂದ ಮಾಡುತ್ತಾ ಇದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಅಕ್ರಮ ಸಾಗುವಳಿ ಮಾಡುವ ಜನರಿಂದ ಜಮೀನು ಬಿಡಿಸಿ ಅಕ್ರಮವಾಗಿ ಪ್ರವೇಶ ಮಾಡಿರುವುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ:—ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅಲ್ಲಿರುವ ಅಧಿಕಾರಿಗಳಿಗೆ ಈಗಾಗಲೇ ಆದೇಶವನ್ನು ಕೊಟ್ಟಿದೆ.

ಶ್ರೀ ಸಿ.ಎಂ.ಎಸ್. ಶಾಸ್ತ್ರಿ:—ಈ ಕೆರೆಗಳಲ್ಲಿ ಅಕ್ರಮ ಸಾಗುವಳಿ ಮಾಡುತ್ತಾ ಇರುವುದಕ್ಕೆ ಸರ್ಕಾರದವರೇ ಅನುಮತಿ ಕೊಟ್ಟು ಮಾಡಿಸುತ್ತಿದ್ದಾರೆಂಬುದು ನಿಜವೇ?

ಶ್ರೀಮತಿ ಬಸವರಾಜೇಶ್ವರಿ:—ಹಾಗೇನೂ ಇಲ್ಲ.

ಶ್ರೀ ಎನ್.ಎ. ಚನ್ನೇಗೌಡ:—ಈಗ ಆ ಕೆರೆಯ ಅಂಗಳದಲ್ಲಿ ಅಕ್ರಮವಾಗಿ ಜಮೀನು ಸಾಗುವಳಿ ಮಾಡುವವರು ರಾಜಕೀಯ ಪಕ್ಷಕ್ಕೆ ಸೇರಿರುವುದರಿಂದ, ಅವರ ಮೇಲೆ ಏನಾದರೂ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದು ಕಷ್ಟ ಅಲ್ಲವೇ?

ಶ್ರೀಮತಿ ಬಸವರಾಜೇಶ್ವರಿ —ಇಲ್ಲ.

ಶ್ರೀ ಎಂ. ಮಲ್ಲಪ್ಪ:—ಈ ಅಕ್ರಮವನ್ನು ತಡೆಯುವುದಕ್ಕೆ ರೆವಿನ್ಯೂ ಅಧಿಕಾರಿಗಳೇ ಸಾಕೇ ಅಥವಾ ಪೋಲೀಸಿನವರೂ ಬೇಕೆ?

ಶ್ರೀಮತಿ ಬಸವರಾಜೇಶ್ವರಿ:—ಪಿ.ಡಬ್ಲ್ಯು.ಡಿ. ಶಾಖೆಯ ಅಧಿಕಾರಿಗಳ ಜೊತೆಗೆ ಪೋಲೀಸಿನವರು ಇದ್ದು ರೆವಿನ್ಯೂ ಇಲಾಖೆಯ ಮುಖಾಂತರ ಕ್ರಮ ತೆಗೆದುಕೊಳ್ಳುತ್ತಾರೆ.

AMOUNT SPENT ON FISHERIES ROADS

390. SRI B. BHASKAR SHETTY (Kaup).—

Will the Minister of State for Fisheries and Ports be pleased to state;—

(*a*) the extent of fisheries roads constructed so far in the State by the Department of Fisheries, Government of Mysore and total amount spent so far for these roads;

(Sri B Bhaskar Shetty)

(*b*) the years in which and the places wherein the roads have been constructed together with extent of roads;

(*c*) the department which is supervising and maintaining the repair works, etc., of the above roads after their construction;

(*d*) whether representations have been received from any one to hand over the supervision of these roads to P.W.D.?

Sri H. C. Linga Reddy (Minister of State for Fisheries and Ports):—

(*a*) (1) Length of Roads ... 70 Miles, 4 Furlongs.
(2) Tatal amount spent; Rs. 30·92 lakhs.

(*b*) *Vide* statement placed on the Table of the House. [Copy placed in the Mysore Legislature Library].

(*c*) Government have issued an order stating that supervision of roads and repair works, etc., should be looked after by the concerned taluk boards.

(*d*) Yes.

ಶ್ರೀ ಬಿ. ಭಾಸ್ಕರಶೆಟ್ಟಿ:—ತಾಲ್ಲೂಕು ಬೋರ್ಡಿನವರೇ ಈ ರಸ್ತೆಗಳ ಮೇಂಟೆನೆನ್ಸ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಈ ರಸ್ತೆಗಳನ್ನು ರಿಪೇರಿ ಮಾಡಬೇಕಾದರೆ ಪುನಃ ೩೧ ಲಕ್ಷ ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎಚ್.ಸಿ. ಲಿಂಗಾರೆಡ್ಡಿ:—ತಾಲ್ಲೂಕು ಬೋರ್ಡ್‌ನವರಿಗೆ ಈ ರಸ್ತೆಗಳ ಮೇಂಟೆನೆನ್ಸ್ ಬಗ್ಗೆ ಮೈಲಿಗೆ ೫೦೦ ರೂಪಾಯಿ ಕೊಡಲು ತಯಾರಿದ್ದೇವೆ. ಅವರೇ ಈ ರಸ್ತೆಗಳನ್ನು ದುರಸ್ತು ಮಾಡಿಕೊಳ್ಳಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ:—ತಾಲ್ಲೂಕು ಬೋರ್ಡಿನವರು ಅವರ ಆ ರಸ್ತೆಗಳನ್ನು ದುರಸ್ತು ಮಾಡಿಕೊಳ್ಳಿ ಎಂದರೆ ಮಾಡಿಕೊಳ್ಳುವುದಿಲ್ಲ. ನಮ್ಮ ರಸ್ತೆಗಳನ್ನು ಅವರು ಮೇಂಟೇನ್ ಮಾಡುವುದಕ್ಕೆ ಮನಸ್ಸು ಇಲ್ಲ. ಉಡುಪಿ ತಾಲ್ಲೂಕ್ ಬೋರ್ಡಿನವರೂ ಸಹ ಎಲ್ಲಾ ರಸ್ತೆಗಳನ್ನು ಮೇಂಟೇನ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿರುವಾಗ, ಈ ರಸ್ತೆಗಳ ರಿಪೇರಿಗಾಗಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ:—ಫಿಷರಿ ಡಿಪಾರ್ಟ್‌ಮೆಂಟಿನಲ್ಲಿ ದುರಸ್ತಿಗೋಸ್ಕರ ಹಣವಿಲ್ಲ. ತಾಲ್ಲೂಕು ಬೋರ್ಡಿನವರು ಇದಕ್ಕೆ ಸಹಕರಿಸುವಂತೆ ಮಾಡಿ ಅವರೇ ದುರಸ್ತು ಮಾಡಿಕೊಳ್ಳುವಂತೆ ಮಾಡಬೇಕು. ಫಿಷರಿ ರೋಡ್ಸ್ ಬಹಳ ಮುಖ್ಯ. ವಿೂನನ್ನು ಸಾಗಿಸುವುದಕ್ಕೆ ಪಿ.ಡಬ್ಲ್ಯು.ಡಿ.ಯವರನು ನಾವು ಕೇಳಿದ್ದೇವೆ ಅವರು ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಫಿಷರಿ ಆಡ್ವೈಸರಿ ಬೋರ್ಡಿನಲ್ಲಿ ತೀರ್ಮಾನವಾಗಿದೆ. ಹೋದಸಾರಿ ನಾನು ಇದೇ ವಿಷಯವನ್ನು ಮಾತನಾಡಿದಾಗ ಬೇರೆಬೇರೆ ತಾಲ್ಲೂಕುಗಳಲ್ಲಿ ೨೦-೩೦ ವೈಲಿಗಳಷ್ಟು ತೆಗೆದುಕೊಂಡಿದ್ದಾರೆ. ಪಿ.ಡಬ್ಲ್ಯು.ಡಿ ಯವರು ಈ ಫಿಷರಿ ರೋಡ್ಸನ್ನು ತೆಗೆದುಕೊಳ್ಳುವುದರಿಂದ ಒಳ್ಳೆಯ ಪ್ರಯೋಜನ ಉಂಟು. ಆದ್ದರಿಂದ ಪಿ.ಡಬ್ಲ್ಯು.ಡಿ. ಮತ್ತು ಫೈನಾನ್ಸ್ ಇಲಾಖೆಗಳನ್ನು ಇದಕ್ಕಾಗಿ ರಿಕ್ವೆಸ್ಟ್ ಮಾಡುತ್ತಿದ್ದೇವೆ.

ಶ್ರೀ ಬಿ. ಎಂ. ಇದ್ದಿನಬ್ಬ :—ಸ್ವಾಮಿ, ೭೬ ಮೈಲಿ ನಾಲ್ಕು ಫರಲಾಂಗ್ ಫಿಷರಿ ರಸ್ತೆ ಇತ್ತು. ಇದು ಮೀನು ಸಾಗಾಣಿಕೆಗೆ ಪ್ರಾಮುಖ್ಯವಾದ ರಸ್ತೆ ಆಗಿರುತ್ತದೆ. ಇಲ್ಲದಿದ್ದರೆ ಮೀನುಗಳು ಕೊಳೆತು ಹೋಗುತ್ತವೆ. ಇಂತಹ ರಸ್ತೆಯ ದುರಸ್ತಿಯನ್ನು ತಾಲ್ಲೂಕು ಬೋರ್ಡಿನವರು ಮಾಡಬೇಕಾಗುತ್ತದೆ, ಎಂದು ಹೇಳುತ್ತೀರಿ. ತಾಲ್ಲೂಕು ಬೋರ್ಡಿನಲ್ಲಿ ಹಣವಿಲ್ಲ. ಅವರು ಅರ್ಧಪಾಲು ಇವರು ಅರ್ಧ ಪಾಲು ವ್ಯಾಪಾರದಲ್ಲಿ ರಸ್ತೆ ರಿಪೇರಿಯಾದ ಹಾಗೆ ಉಳಿದಿದೆ. ಪಿ.ಡಬ್ಲ್ಯೂ.ಡಿ ಆಗಲಿ, ಫಿಷರೀಸ್ ಇಲಾಖೆಯವರಾಗಲಿ ಅತಿ ಶೀಘ್ರವಾಗಿ ಇದರ ದುರಸ್ತನ್ನು ಮಾಡುವ ಕ್ರಮ ಸರಕಾರ ಕೈಗೊಳ್ಳುತ್ತದೆಯೇ ?

ಶ್ರೀ ಹೆಚ್. ಸಿ. ಲಿಂಗಾರೆಡಿ :—ಈ ರಸ್ತೆಗಳು ಬಹಳ ಮುಖ್ಯವಾದುದ್ದು. ತಾಲ್ಲೂಕು ಬೋರ್ಡ್‌ಗಳು ಅವರೂ ಕೂಡ ತಮ್ಮ ಆದಾಯ ಮತ್ತು ಸಂಪನಮ್ಮೂಲಗಳನ್ನು ಹೆಚ್ಚಿಸಿಕೊಂಡು ಸಹಕರಿಸಿ ಕೆಲಸ ಮಾಡುವುದು ಒಳ್ಳೆಯದು. ಈಗಾಗಲೇ ೫೦೦ ರೂಪಾಯಿಗೆ ಮೇಲ್ಪಟ್ಟು ಕೊಡುವುದಕ್ಕೆ ಮುಂದೆ ಬಂದಿದ್ದೇವೆ ಪಬ್ಲಿಕ್ ವರ್ಕ್ಸ್ ಇಲಾಖೆಯವರನ್ನು ದುರಸ್ತಿ ಮಾಡಬೇಕೆಂದು ಕೇಳುತ್ತಿದ್ದೇವೆ.

ಶ್ರೀ ಹೆಚ್. ಎಂ. ಜಯಪ್ರಕಾಶ ನಾರಾಯಣ :—ಮೀನುಗಾರಿಕೆ ರಸ್ತೆಗಳನ್ನು ದುರಸ್ತು ಮಾಡವುದಕ್ಕೆ ನಾವು ಹಣವನ್ನು ಒದಗಿಸಿರುತ್ತೇವೆ. ಹತ್ತಾರು ವರ್ಷಗಳಿಂದಲೂ ತಾಲ್ಲೂಕು ಬೋರ್ಡಿನಲ್ಲಿ ಇದರ ಬಗ್ಗೆ ನಿರ್ಣಯಾವಾಗಿದೆ. ಡಿಸ್ಟ್ರಿಕ್ಟ್ ಡೆವಲಪ್ ಮೆಂಟ್ ಕೌನ್ಸಿಲ್ಲಿನಲ್ಲಿಯೂ ನಿರ್ಣಯವಾಗಿದೆ. ಫಿಷರೀಸ್ ಅಡ್ವೈಜರಿ ಬೋರ್ಡಿನವರು ಸರಕಾರಕ್ಕೆ ಪತ್ರ ಬರೆದಿದ್ದಾರೆ. ಅವರೂ ಸಹ ೧೫೦-೨೦೦ ಮೀನುಗಾರಿಕೆ ಜನಗಳ ಉಪಯೋಗಕ್ಕಾಗಿ ಈ ರಸ್ತೆ ಎರಡು ಮೈಲಿ ಇದೆ. ಎಷ್ಟು ಒತ್ತಾಯ ಮಾಡಿದರೂ ಮಾಡಿಸಿಕೊಟ್ಟಿಲ್ಲ ಇದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಈ ವರ್ಷ ರಸ್ತೆ ದುರಸ್ತಿ ಮಾಡಿಸುತ್ತೀರಾ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ :—ಫಿಷರೀಸ್ ಇಲಾಖೆವರು ರಸ್ತೆಗಳನ್ನು ಮಾಡಿರುವುದು ರಸ್ತೆ ದುರಸ್ತಿ ಮಾಡುವ ವಿಚಾರದಲ್ಲಿ ಸರಕಾರದವರು ಉದಾರವಾದ ತೀರ್ಮಾನ ಮಾಡಿ ಮೈಲಿಗೆ ೫೦೦ ರೂಪಾಯಿ ಕೊಡಲು ಸಿದ್ಧವಾಗಿದ್ದಾರೆ ತಾಲ್ಲೂಕು ಬೋರ್ಡಿನವರು ಕೊಡಬೇಕಾದಂಥ ೬೫೦ ರೂಪಾಯಿ ಕೊಡದೆ ತೊಂದರೆಯಾಗಿದೆ.

ಶ್ರೀ ಹೆಚ್. ಎಂ. ಜಯಪ್ರಕಾಶ ನಾರಾಯಣ :—ಅಂಕೋಲಾ ತಾಲ್ಲೂಕು ಬೋರ್ಡಿನವರು ರಸ್ತೆಗಳನ್ನು ವಹಿಸಿಕೊವ್ಳುದಕ್ಕೆ ಸಿದ್ಧವಾಗಿದ್ದಾರೆ ಅವರಿಗೆ ಕೊಡುತ್ತೀರಾ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ :- ಅವರಿಗೆ ಕೊಡುತ್ತೇವೆ. ಅದಕ್ಕೆ ತೊಂದರೆ ಇಲ್ಲ.

SMT. WINNIFRED F. FERNANDES :—These road have been named as Fishery roads. Naturally these have to be maintained by the Fishery Department. The Hon. Minister was pleased to say that the Taluk Boards are not in a position to take up these roads. For the last 3 years. No work has been done on these roads. Will the Government do the aspbaulting works and then handover these roads to the Taluk Boards ?

SRI H. C. LINGA REDDY :—That is what I have stated that it is under consideration of the Government.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮೀನುಗಾರಿಕೆ ಇಲಾಖೆಯಲ್ಲಿ ರಸ್ತೆಮಾಡುವುದಕ್ಕೆ ಮುಂಚೆ ಸಾಲಬಾದು ಕಾಮಗಾರಿಯನ್ನು ಯಾರು ಮಾಡಬೇಕೆಂದು ಯೋಚನೆ ಮಾಡಬೇಕಾಗಿತ್ತು. ಅದನ್ನು ತೀರ್ಮಾನ ಮಾಡದೆ ಈಗ ಯಾರಿಗೂ ಬೇಕಾಗಿಲ್ಲದೆ ಇರುವ ಕೂಸಾಗಿದೆ. ಮುಂದೆ ಏನು ಮಾಡುತ್ತೀರಾ ?

ಶ್ರೀಮತಿ ಲೀಲಾವತಿ ರೈ :—ಫಿಷರೀಸ್ ಡಿಪಾರ್ಟ್ ಮೆಂಟಿನವರ ತಾಲ್ಲೂಕು ಬೋರ್ಡುಗಳು ರಸ್ತೆಗಳ ದುರಸ್ತಿಯನ್ನು ಮಾಡಬೇಕೆಂದು ಹೇಗೆ ಹೇಳುತಿದ್ದಾರೆಯೋ ಹಾಗೆಯೇ ಫಾರಸ್ಟ್ ಡಿಪಾರ್ಟ್ ಮೆಂಟಿನಲ್ಲಿ ಇರುವ ರಸ್ತೆಗಳನ್ನು ತಾಲ್ಲೂಕು ಬೋಡಿನವರು ದುರಸ್ತು ಮಾಡಬೇಕೆಂದು ಹೇಳುತ್ತಿದ್ದಾರೆ. ಎಲ್ಲ ರಸ್ತೆಗಳನ್ನು ದುರಸ್ತು ಮಾಡುವುದು ಸರಿಯೇ ಆದರೆ ಆ ಇಲಾಖೆಗಳಿಂದ ಬಂದ ಉತ್ಪತ್ತಿಯಲ್ಲಿ ಭಾಗವನ್ನು ತಾಲ್ಲೂಕು ಬೋರ್ಡುಗಳಿಗೆ ಬಿಟ್ಟು ಕೊಡುವ ಅಭಿಪ್ರಾಯ ಸರಕಾರಕ್ಕೆ ಇದೆಯೇ ?

ಉಪಾಧ್ಯಾಕ್ಷರು :—ತಾಲ್ಲೂಕು ಬೋರ್ಡಿನವರು ರಿಸೋರ್ಸ್‌ಸ್ ಜಾಸ್ತಿ ಮಾಡಬೇಕೆಂದು ಉತ್ತರ ಹೇಳಿದರು.

ಶ್ರೀ ಬಿ. ಭಾಸ್ಕರ ಶೆಟ್ಟಿ :—೭೬ ಮೈಲಿ ನಾಲ್ಕು ಫರ್ಲಾಂಗ್ ರಸ್ತೆಗೆ ೩೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಾ : ೬೦ನೇ ಇಸವಿಯಲ್ಲಿ ರಸ್ತೆಗಳು ಆಗಿವೆ. ೬೦ನೇ ಇಸವಿಯೊಳಗೆ ಆದ ರಸ್ತೆಗೆ ಇಷ್ಟರವರೆಗೆ ಮೈಂಟೆನ್ಸ್‌ಗೆ ನೀವು ಎಷ್ಟು ಖರ್ಚು ಮಾಡಿದ್ದೀರಾ ? ತಾಲ್ಲೂಕು ಬೋರ್ಡಿನವರು ಎಷ್ಟು ಖರ್ಚು ಮಾಡಿದ್ದಾರೆ ? ಲೆಕ್ಕಾಚಾರ ಏನಾದರೂ ಇದೆಯೇ ?

ಶ್ರೀ ಹೆಚ್ ಸಿ ಲಿಂಗಾರೆಡ್ಡಿ :—ಆ ರಸ್ತೆಗಳನ್ನು ಮೆಟಲ ರೋಡುಗಳಾಗಿ ಮಾಡಿದ್ದು ಅವು ಇಲ್ಲಿಯವರೆಗೂ ಬಹಳ ಮಟ್ಟಿಗೆ ಚೆನ್ನಾಗಿವೆ. ಕೆಲವುಕಡೆ ಕೆಟ್ಟು ಹೋಗಿವೆ. ಎಂದು ಗೊತ್ತಾಗಿದೆ. ತಾಲ್ಲೂಕು ಬೋರ್ಡಿನವರು ರಿಪೇರಿ ಮಾಡಿದ್ದರೆ ಆಗುತ್ತಿತ್ತು.

ಶ್ರೀ ಬಿ. ಭಾಸ್ಕರ ಶೆಟ್ಟಿ :—ಒಂದು ಪೈ ಕೂಡ ಖರ್ಚು ಮಾರ್ಡಲಿಲ್ಲ. ಫಿಷರೀಸ್ ಡಿಪಾರ್ಟ್‌ಮೆಂಟ, ತಾಲ್ಲೂಕು ಬೋರ್ಡು ಎಷ್ಟು ಖರ್ಚು ಮಾಡಿದ್ದಾರೆ ಎಂದು ತಮ್ಮ ಹತ್ತಿರ ಲೆಕ್ಕಾಚಾರ ಇದೆಯೇ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ :—ಆ ಲೆಕ್ಕಾಚಾರ ಇಲ್ಲ.

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ :—ಐ. ವಿ. ಸಿ. ರೋಡ್ಸ್, ಆರ್‌ಸಿ., ರೋಡುಗಳು ಮತ್ತು ಫ್ಯಾಮೀನ್ ರಿಲೀಫ ರೋಡ್ಸು ಇವುಗಳನ್ನು ಮಾಡಿ ತಾಲ್ಲೂಕು ಬೋರ್ಡ್‌ಗೆ ವಹಿಸಿಕೊಡುತ್ತಿದ್ದೇವೆ ಹಾಗೆಯೇ ಇಂಡಿಯಾ ಸರಕಾರದವರು ಕ್ರಾಷ್ ಪ್ರೋಗ್ರಾಂ ಪ್ರಕಾರ ಕೊಟ್ಟಂಥ ಹಣದಿಂದ ಫಿಷರೀಸ್ ಇಲಾಖೆಯವರು ಈ ರಸ್ತೆಗಳನ್ನು ಮಾಡಿ ತಾಲ್ಲೂಕು ಬೋರ್ಡುಗೆ ವಹಿಸಿಕೊಟ್ಟು ಮೈಲಿಗೆ ೫೦೦ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ತಾಲ್ಲೂಕು ಬೋರ್ಡಿನವರು ತಮ್ಮ ಆದಾಯವನ್ನು ಜಾಸ್ತಿಮಾಡಿ ರಸ್ತೆಗಳ ರೀಪೆರಿಯನ್ನು ತೆಗೆದುಕೊಳ್ಳಬೇಕು. ಮತ್ತು ಅವರು ಸಹಕರಿಸುವಂತೆ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈ ರಸ್ತೆಗಳನ್ನು ಮಾಡುವ ಸದಯದಲ್ಲಿ ಮುಂದೆ ಯಾರು ಮೈಂಟೀನ್ ಮಾಡಬೇಕು ಎಂದು ತೀರ್ಮಾನ ಯಾಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಹೆಚ್. ಸಿ. ಲಿಂಗಾರೆಡಿ :—ಅದನ್ನು ಮಾಡಿರಲಿಲ್ಲ. ಹಣ ದೊರೆತರೆ ರಸ್ತೆಗಳನ್ನು ಮಾಡೋಣ, ದರಸ್ತಿ ಮಾಡುವ ವಿಚಾರ ಆ ಮೇಲೆ ಯೋಜನೆ ಮಾಡೋಣ ಎಂದು ಭಾವಿಸಿದ್ದೆವು. ಈಗ ಮೈಲಿಗೆ ೫೦೦ ರೂಪಾಯಿ ಕೊಡಲು ಒಪ್ಪಿಕೊಂಡಿದ್ದೇವೆ.

SRI P. V. AITHALA :—Is it not a fact that the Government is very much interested in internal fishery roads than coastal roads ?

SRI H. C. LINGA REDDY :—The Government is interested both in internal fishery roads and external fishery roads.

ಶ್ರೀ ಕೆ. ಎ. ಜಾಲಿಸತ್ತಗಿ :—ಸಮುದ್ರ ಕರಾವಳಿಯಲ್ಲಿ ೨೦೦ ಇಂಚು ಮಳೆ ಬರುತ್ತದೆ, ಆದುದರಿಂದ ರಸ್ತೆಗಳು ಹಾಳಾಗಿ ಹೋಗುತ್ತವೆ. ಸಮುದ್ರ ದಡದಿಂದ ಒಳನಾಡಿಗೆ ಬರುವಂಥ ಈ ರಸ್ತೆಗಳನ್ನು ಫಿಷರೀಸ್ ಡಿಪಾರ್ಟ್ ಮೆಂಟ್ ನವರು ಮಾಡಿದ್ದು ಇದನ್ನು ಆದಷ್ಟು ಬೇಗ ದುರಸ್ತಿ ಮಾಡುವ ಪ್ರಯತ್ನ ಮಾಡುತ್ತೀರಾ ?

SRI H. C. LINGA REDDY :—We are discussing this matter with the Finance Ministry and also with the P. W. D. In case if there is any favourable response, this things will be done more easily.

APPOINTMENT OF I AND II DIVISION CLEKRS IN JUDICIAL DEPARTMENT

461. SRI P. V. AITHALA (Suratkal):—

Will the Minister for Law, Labour and Parliamentary Affairs be pleased to state :—

(*a*) Whether the Appointment to the cadre of I and II Division Clerks in the Judicial Department came within the purview of Mysore Public Service Commission from 12th December 1965 ;

(*b*) Whether it is a fact that there was no other authority functioning for appointments in the above cadre till 12th October 1965 as the State Level Recruitment Committees and Divisional Level Recruitment Committees were not made applicable to the Judicial Department ;

(*c*) Whether it is a fact that the direct recruitment by the Public Service Commission has been given effect to retrospectively from the date of the coming into force of the Judicial Services (Class III and IV Posts Recruitment) Rules, 1960 in the unit of South Kanara District only ?

SRI K. PUTTASWAMY :— (Minister for Law Labour and Parliamentary Affairs.)

(*a*) Yes.

(*b*) No.

(*c*) No.

SRI P. V. AITHALA :—In answer to question (b) itis stated 'no' May I know who was the authority to appoint the I and II Division Clerks in the Judicial Department ?

SRI K. PTTTASWAMY :—The District and Session udge.

SRI P. V. AITHALA :—In answer to (c) it is stated 'no' Will the Government atleast see that the promotion given after 1965 be given with retrospective effect ?

SRI K. PUTTASWAMY :—There is no question of giving with retrospective effect.